# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 992 |
| ಉತ್ತರಿಸಬೇಕಾದ ದಿನಾಂಕ | : | 20.08.2025 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಲ್ಲಿ ವಿವಿಧ ನಿಗಮಗಳ ಅಡಿಯಲ್ಲಿ ಹಂಚಿಕೆಯಾದ ಮನೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು). | 2024-25ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರವು ಹೊಸ ಮನೆಗಳ ಗುರಿಯನ್ನು ನಿಗಧಿಪಡಿಸಿರುವುದಿಲ್ಲ.<br><br>ಆದರೆ, 2016-17 ರಿಂದ 2021-22ನೇ ಸಾಲಿನವರೆಗಿನ ವಿವಿಧ ವಸತಿ ಯೋಜನೆಯಡಿ ಕಾಮಗಾರಿ ಆದೇಶ ನೀಡಿ 1 ರಿಂದ 2 ವರ್ಷ ಕಾಲಾವಕಾಶ ನೀಡಿದ ನಂತರವೂ ಪ್ರಾರಂಭವಾಗದ ಮನೆಗಳನ್ನು ಹಾಗೂ 2022-23ನೇ ಸಾಲಿಗೆ ಮಂಜೂರು ಮಾಡಲಾದ ಮನೆಗಳ ಗುರಿಯ ಪೈಕಿ ಆನ್‌ಲೈನ್ ನಲ್ಲಿ ನಿಗಧಿಪಡಿಸಲು ಬಾಕಿ ಇರುವ ಮನೆಗಳ ಗುರಿಯನ್ನು ಹಿಂಪಡೆದು ರದ್ದುಪಡಿಸಲಾಗಿದೆ. ಹೀಗೆ ರದ್ದುಪಡಿಸಲಾದ ಮನೆಗಳ ಗುರಿಯನ್ನು ವಿವಿಧ ವಿಧಾನಸಭಾ ಕ್ಷೇತ್ರ/ಗ್ರಾಮ ಪಂಚಾಯಿತಿಗಳಿಗೆ 2024-25ನೇ ಸಾಲಿಗೆ ಮರು ಹಂಚಿಕೆ ಮಾಡಲಾಗಿರುತ್ತದೆ. ಅದರನ್ವಯ ಬೀದರ್ ಜಿಲ್ಲೆಗೆ ಬಸವ ವಸತಿ ಯೋಜನೆಯಡಿ 250 ಮನೆಗಳ ಗುರಿಯನ್ನು ಹಂಚಿಕೆ ಮಾಡಲಾಗಿದೆ. ಸದರಿ ಗುರಿಗೆ ಎದುರಾಗಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>ಕೇಂದ್ರ ಪುರಸ್ಕೃತ ಯೋಜನೆಯಾದ ಪ್ರಧಾನಮಂತ್ರಿ ಆವಾಸ್ ಯೋಜನೆ(ಗ್ರಾಮೀಣ)ಯಡಿಯಲ್ಲಿ 2024-25ನೇ ಸಾಲಿಗೆ ರಾಜ್ಯಾದ್ಯಾಂತ ಒಟ್ಟು 7,02,731 ಮನೆಗಳ ಗುರಿಯನ್ನು ಹಂಚಿಕೆ ಮಾಡಲಾಗಿರುತ್ತದೆ. ಈ ಪೈಕಿ ಬೀದರ್ ಜಿಲ್ಲೆಗೆ 47,458 ಮನೆಗಳ ಗುರಿಯನ್ನು ನಿಗದಿಪಡಿಸಲಾಗಿದ್ದು, ಸದರಿ ಗುರಿಗೆ ಎದುರಾಗಿ 21,904 ಮನೆಗಳಿಗೆ ಫಲಾನುಭವಿಗಳನ್ನು ಆಯ್ಕೆಗೊಳಿಸಿ ಕಾಮಗಾರಿ ಆದೇಶ ನೀಡಲಾಗಿದೆ.<br><br>ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳ ತಾಲ್ಲೂಕುವಾರು ವಿವರ ಇಂತಿದೆ: |

| ತಾಲ್ಲೂಕು | ಹಂಚಿಕೆ ಮಾಡಲಾದ ಗುರಿ | ಮಂಜೂರಾದ ಮನೆಗಳು |
|---|---|---|
| ಔರಾದ್ | 7758 | 2731 |
| ಬಸವ ಕಲ್ಯಾಣ | 6920 | 4669 |
| ಭಾಲ್ಕಿ | 8748 | 3110 |
| ಬೀದರ್ | 8220 | 3317 |
| ಚಿಟ್ಟಗುಪ್ಪ | 3527 | 1339 |
| ಹುಲಸೂರು | 1958 | 1110 |
| ಹುಮನಾಬಾದ್ | 5517 | 3677 |
| ಕಮಲನಗರ | 4810 | 1951 |
| **ಒಟ್ಟು** | **47458** | **21904** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಪಾರದರ್ಶಕವಾಗಿ ಮನೆಗಳ ಹಂಚಿಕೆ ಮಾಡುವಲ್ಲಿ ಸರ್ಕಾರ ಯಾವ ಯಾವ ಮಾನದಂಡ ಅನುಸರಿಸುತ್ತಿದೆ? (ಮಾಹಿತಿ ನೀಡುವುದು) | ರಾಜ್ಯ ವಸತಿ ಯೋಜನೆಗಳಡಿ ಪಂಚಾಯಿತಿ ಸದಸ್ಯರ ಸಂಖ್ಯೆಗೆ ಅನುಗುಣವಾಗಿ A B C ಎಂದು ವರ್ಗೀಕರಿಸಿ ಮನೆಗಳ ಗುರಿಯನ್ನು ನೀಡಲಾಗುತ್ತದೆ ಹಾಗೂ ಕೆಲವೊಂದು ಜನಪ್ರತಿನಿಧಿಗಳ ಕೋರಿಕೆ ಮೇರೆಗೆ ಹೆಚ್ಚುವರಿ ಮನೆಗಳ ಗುರಿಯನ್ನು ಸರ್ಕಾರದ ಹಂತದಲ್ಲಿ ನೀಡಲಾಗುತ್ತದೆ.<br><br>ಕೇಂದ್ರ ವಸತಿ ಯೋಜನೆಯಾದ ಪಿಎಮ್‌ಎವೈ (ಗ್ರಾಮೀಣ) ಯೋಜನೆಯಡಿ ಮನೆಗಳ ಗುರಿಗಳನ್ನು ಕೇಂದ್ರ ಸರ್ಕಾರವು ಗ್ರಾಮ ಪಂಚಾಯಿತಿವಾರು Awassoft website ನಲ್ಲಿ ಲಭ್ಯವಿರುವ permanent waiting list ವಸತಿ/ನಿವೇಶನರಹಿತರ ಅಂಕಿ ಅಂಶದ ಮೇರೆಗೆ ಹಾಗೂ ಸದರಿ ಗ್ರಾಮಪಂಚಾಯಿತಿಯಲ್ಲಿ ಕಳೆದ 3 ವರ್ಷಗಳಲ್ಲಿ ನರೇಗಾ ಯೋಜನೆಯಡಿ ಸೃಜನೆಯಾದ ಮಾನವದಿನಗಳ ಆಧಾರದ ಮೇರೆಗೆ ಮನೆಗಳ ಗುರಿಯನ್ನು ನೀಡಲಾಗುತ್ತದೆ. |

ಸಂಖ್ಯೆ: ವಇ 381 ಹೆಚ್‌ಎಎಂ 2025

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು